

ಡಾ.ವಿನೋದ ಛೆಬ್ಬಿ

ಪ್ರಸಾರ ಮಾಧ್ಯಮಗಳು ಪರಸಂಬಂಧಗಳನ್ನು ವೈಭವೀಕರಿಸಿ ತೋರಿಸುವುದನ್ನು ನಾವು ತನ್ಮಯತೆಯಿಂದ ವೀಕ್ಷಿಸುತ್ತೇವೆ!

# 72: ಪರಸಂಬಂಧದ ದ್ವಂದ್ವ

ಪರಸಂಬಂಧವನ್ನು ಎಲ್ಲರಿಗೂ ಅನ್ವಯವಾಗುವಂಥ ಒಂದು ವ್ಯಾಖ್ಯೆಯೊಳಗೆ ಹಿಡಿದಿಡುವುದು ಸುಲಭವಲ್ಲ, ಯಾಕೆಂದರೆ ಅದು ಆಯಾ ದಂಪತಿಗಳ ಅನಿಸಿಕೆ ಹಾಗೂ ವಿಚಾರಧಾರೆಯನ್ನು ಅನುಸರಿಸಿ 'ವೈಯಕ್ತಿಕ'ವಾಗಿರುತ್ತದೆ ಎಂದು ಮಾತಾಡಿಕೊಳ್ಳುತ್ತಿದ್ದೆವು. ಈ ಸಲ ಪರಸಂಬಂಧದ ಬಗೆಗೆ ನಮ್ಮ ಸಮಾಜದಲ್ಲಿರುವ ನಂಬಿಕೆಗಳು ಹಾಗೂ ನಮ್ಮ ಅನಿಸಿಕೆಗಳ ಕುರಿತು ತಿಳಿಯೋಣ.

ಪರಸಂಬಂಧಗಳು ಕುಟುಂಬ ವ್ಯವಸ್ಥೆಗೆ ಪ್ರತಿಕೂಲವಾಗಿರುವುದರಿಂದ ಅವುಗಳನ್ನು ಸಾಮಾಜಿಕವಾಗಿ ಅಪನಂಬಿಕೆಯಿಂದ ಕಾಣಲಾಗುತ್ತದೆ. ಪರಸಂಬಂಧ ಇರುವವರನ್ನು ತುಚ್ಛೀಕರಿಸಲಾಗುತ್ತದೆ. ಕಾನೂನು ಇದಕ್ಕೆ ವ್ಯಭಿಚಾರ ಎಂದು ಹೆಸರಿಸಿ ಅಪರಾಧವನ್ನಾಗಿ ಮಾಡಿದರೆ, ಧಾರ್ಮಿಕ ನಿಯಮಗಳು ಇದನ್ನು ಅನೈತಿಕ, ಪಾಪವೆಂದು ನರಕದ ಭಯ ತೋರಿಸುತ್ತವೆ.

ಅದೆಲ್ಲ ಸರಿಯೆ. ಆದರೆ ಇದಕ್ಕೆ ವಿರುದ್ಧವಾದ ಇನ್ನೊಂದು ದೃಷ್ಟಿಕೋನ ನಮ್ಮಲ್ಲಿದೆ. ಅದು ಸಾಕಷ್ಟು ವ್ಯಾಪಕವಾಗಿಯೂ ಇದೆಯೆಂಬುದು ಗೊತ್ತೆ?

ಪರಸಂಬಂಧಗಳು ಗಮನ ಸೆಳೆದಾಗ ಇದು ಕೆಟ್ಟದ್ದು, ಇದರಿಂದ ಭೀಕರ ಪರಿಣಾಮಗಳಾಗುತ್ತವೆ ಎನ್ನುತ್ತ ವಿವೇಕ ಕಡಿವಾಣ ಹಾಕುತ್ತದೆ. ಜೊತೆಜೊತೆಗೇ, ಒಂದುವೇಳೆ ಹೀಗಾದರೆ ಹೇಗಿರಬಹುದು ಎಂಬ ವಿಚಾರವು ಮನಸ್ಸಿನಲ್ಲಿ ರೋಚಕ ಕಲ್ಪನೆಗಳನ್ನು ಹುಟ್ಟುಹಾಕುತ್ತ, ಇದು 'ಹೀಗೆಹೀಗೆಲ್ಲ' ಇರಬಹುದೇ ಎಂದು ಕೆಟ್ಟ ಕುತೂಹಲವನ್ನೂ ಹುಟ್ಟಿಸುತ್ತದೆ. ಈ ಮನೋವಿದ್ಯಮಾನದ ಬಗೆಗೆ ಸ್ವಲ್ಪ ತಿಳಿಯೋಣ.

ಪರಸಂಬಂಧಗಳು ಬಹಿರಂಗದಲ್ಲಿ ನಿಷೇಧವೆನಿಸಿದರೂ ಅಂತರಂಗದಲ್ಲಿ ನಮ್ಮ ಪ್ರಣಯದ ಕಲ್ಪನೆಗಳಿಗೆ **Forbidden fruits are sweet** ಎನ್ನುವಂತೆ ರೋಚಕತೆಯ ರೆಕ್ಕೆಪುಕ್ಕ ಹಚ್ಚುತ್ತವೆ. ವಾಸ್ತವವಾಗಿ ನಡಕೊಂಡರೆ ಪರಿಣಾಮ ಕೆಟ್ಟದಾಗುತ್ತದೆ ಸರಿ, ಆದರೆ ಮನದಲ್ಲಿ ನೆನೆದರೆ ಏನೂ ತೊಂದರೆ ಇಲ್ಲವಲ್ಲ? ಹಾಗಾಗಿ ನಾವು ಸ್ವತಃ ಮಾಡುವುದಿಲ್ಲ. ಬದಲು, ಅವರಿವರು ಮಾಡುವುದನ್ನು ಆಡಿಕೊಳ್ಳುತ್ತ 'ಅದು ಕೆಟ್ಟದ್ದು' ಎನ್ನುತ್ತೇವೆ. 'ಅದು' ಎಂದರೆ ಯಾವುದು, ಅದರಲ್ಲಿ 'ಏನೇನು' ಇದೆ ಎಂದೆಲ್ಲ ನಿರ್ದಿಷ್ಟವಾಗಿ ಮನಸ್ಸಿನಲ್ಲಿ ತಂದುಕೊಳ್ಳದ ಹೊರತು 'ಅದು' ನೆನಪಿಗೆ ಬರುವುದಿಲ್ಲ. ಹಾಗಾಗಿ, ನಾವು ನಿಷೇಧಿಸಿದ್ದನ್ನು ಬೇರೆಯವರ ಮೇಲೆ ಪ್ರಕ್ಷೇಪಗೋಳಿಸಿ, ಅದು 'ಅವರಿಂದ ಬಂದದ್ದು' ಎನ್ನುತ್ತ ನಮ್ಮ ಮನಸ್ಸಿನಲ್ಲಿ ಬರಿಸಿಕೊಂಡು ಬೇಡವೆನ್ನುತ್ತಲೇ ಸವಿಯುತ್ತೇವೆ! (ಇದನ್ನು ಅರ್ಥಮಾಡಿಕೊಳ್ಳಲು ಈ ಪ್ರಸಂಗ ಕಲ್ಪಿಸಿಕೊಳ್ಳಿ: ಮದುವೆಯ ಊಟದಲ್ಲಿ ನಿಮಗೆ ಲಡ್ಡು ಬೇಕಿದೆ, ಕೇಳಲು ಸಂಕೋಚವಾಗುತ್ತದೆ ಎಂದುಕೊಳ್ಳಿ. ಆಗ ಏನು ಮಾಡುತ್ತೀರಿ? ನಿಮ್ಮ ಬದಿಯಲ್ಲಿ ಕುಳಿತುಕೊಂಡಿರುವವರಿಗೆ ಲಡ್ಡು ಬೇಕೆಂದು ಏರುದನಿಯಲ್ಲಿ ಬಡಿಸುವವರನ್ನು ಕರೆಯುತ್ತೀರಿ. ಹಾಗೆ ಬಡಿಸುವಾಗ ನಿಮ್ಮ ಎಲೆಗೂ ಎರಡು ಲಾಡು ಬೀಳುವುದು ಖಂಡಿತ!). ಅಷ್ಟೇ ಅಲ್ಲ, ಪರಸಂಬಂಧದ ರೋಚಕತೆಯನ್ನು ಸವಿಯಲು ಎಲ್ಲರೂ ಒಪ್ಪುವ ಮಾರ್ಗವನ್ನೂ ಆರಿಸಿಕೊಂಡಿದ್ದೇವೆ. ಅದೇ ನಮ್ಮ ಮಾಧ್ಯಮಗಳು.

ನಮ್ಮ ಚಲನಚಿತ್ರಗಳಲ್ಲಿ ಸಾಕಷ್ಟು ಕಡೆ ಕಥಾವಸ್ತುವು ಪರಸಂಬಂಧವನ್ನು ಒಳಗೊಂಡಿರುತ್ತದೆ. ಕಿರುಪರದೆಗಳಲ್ಲಿ ಬರುವ ದೈತ್ಯ ಧಾರಾವಾಹಿಗಳಲ್ಲಿ ಪರಸಂಬಂಧಗಳನ್ನು ರಸವತ್ತಾಗಿ ಚಿತ್ರಿಸಲಾಗುತ್ತದೆ. ಅವುಗಳನ್ನು ತನ್ಮಯತೆಯಿಂದ ವೀಕ್ಷಿಸಿ ಮನದುಂಬ ತಣಿಯುತ್ತೇವೆ. ಹಾಗಾಗಿಯೇ ಪರಸಂಬಂಧದ ಕಥೆಗಳನ್ನು ಮಾಧ್ಯಮಗಳು ವೈಭವೀಕರಿಸಿ ತೋರಿಸುತ್ತವೆ ಮಾಧ್ಯಮಗಳು ನಮ್ಮ ಮನಸ್ಸಿನ ಬಹಿರಂಗ ರೂಪ ತಾನೆ?

ದ್ವಂದ್ವಭಾವ: ನಮ್ಮ ಸಮಾಜ ದಾಂಪತ್ಯ ಹಾಗೂ ಕುಟುಂಬ ವ್ಯವಸ್ಥೆಯನ್ನು ಗೌರವಿಸುತ್ತದೇನೋ ನಿಜ, ಆದರೆ ನಮ್ಮಲ್ಲಿ ಲೈಂಗಿಕ ಅಭಿವ್ಯಕ್ತಿಯ ಬಗೆಗೆ ನಿರ್ದಿಷ್ಟ ಅಭಿಪ್ರಾಯವಿಲ್ಲ ಎಂಬುದು ಎದ್ದುಕಾಣುತ್ತದೆ. ಉದಾಹರಣೆಗೆ, ಒಂದುಕಡೆ ಪರಸಂಬಂಧವು ಜಾರಪ್ರವೃತ್ತಿ ಎಂದು ಜರೆದರೂ ಇನ್ನೊಂದುಕಡೆ ಅದರ ಸುತ್ತ ಹೆಣೆದ ಧಾರಾವಾಹಿಗಳನ್ನು ವರ್ಷಗಟ್ಟಲೆ ನೋಡುತ್ತೇವೆ. ನಮ್ಮ ಪರಿಚಯದವರು ಪರಸಂಬಂಧದಲ್ಲಿ ತೊಡಗಿದರೆ ತಿರಸ್ಕಾರದಿಂದ ನೋಡುವ ನಾವು ಅದೇ ಕಥಾವಸ್ತುವನ್ನಾಗಿ ಆಧರಿಸಿದ ಕತೆ, ಕಾದಂಬರಿಗಳನ್ನು ತನ್ಮಯತೆಯಿಂದ ಸವಿಯುತ್ತೇವೆ. (ಬಹಿರಂಗವಾಗಿ ತಿರಸ್ಕರಿಸುತ್ತ ಅಂತರಂಗದಲ್ಲಿ ಬಯಸುವ ನೀಲಿಚಿತ್ರಗಳೂ ಸೇರಿವೆ.) ಅಷ್ಟೇ ಅಲ್ಲ, ಮಾಧ್ಯಮಗಳೂ ಪರಸಂಬಂಧದ ಬಗೆಗೆ ಎರಡೆರಡು ಅನಿಸಿಕೆಗಳನ್ನು ಕೊಡುತ್ತವೆ. ಉದಾಹರಣೆಗಾಗಿ, ಅವಿವಾಹಿತ ತರುಣತರುಣಿಯರ ನಿಕಟತೆಯ ಕತೆಯ ರೋಚಕತೆಯಿಂದ ಆಗುವ ಭಾವೋದ್ವೇಗವು ಪರಸಂಬಂಧದಲ್ಲೂ ನಮಗಾಗುತ್ತದೆ. ಆದರೆ ಅದೇ ನಮ್ಮ ಕುಟುಂಬದಲ್ಲಿ ನಡೆಯುವುದನ್ನು ಕಲ್ಪಿಸಿಕೊಳ್ಳುವುದು ನಮಗಾಗುವುದಿಲ್ಲ.

ಮಾಧ್ಯಮಗಳಲ್ಲಿನ ಹೊರಸಂಬಂಧಗಳ ಕಥಾವಸ್ತು ಸಾಮಾನ್ಯವಾಗಿ ಹೀಗಿರುತ್ತದೆ: ಹೆಚ್ಚಿನಂಶ ಗಂಡು ಹೊರಸಂಬಂಧಕ್ಕೆ ಕೈಹಾಕುತ್ತಾನೆ. ಕಥೆ ಚ್ಯೂಯಿಂಗ್ ಗಮ್ ಆಗುತ್ತದೆ. ಕೊನೆಯಲ್ಲಿ ಒಂದೋ ಅವನು ಬುದ್ಧಿಕಲಿತು ಹೆಂಡತಿಯನ್ನು ಮರಳಿ ಕೂಡಿ, ಹೀರೋ ಅನ್ನಿಸಿಕೊಳ್ಳುತ್ತಾನೆ. ಅಥವಾ ಆತನ ಪ್ರಣಯಿ (ತನ್ನಿಂದ ಒಂದು ಕುಟುಂಬ ಒಡೆಯುತ್ತದೆಂದು) ಹಿಂದೆ ಸರಿಯುತ್ತಾಳೆ, ಅಥವಾ ಸಾವನ್ನಪ್ಪಿ ಹುತಾತ್ಮಳಾಗುತ್ತಾಳೆ. ಇದನ್ನೇ ಕಾಯುತ್ತಿದ್ದಂತೆ ಗಂಡ ಹೆಂಡಿರ ಪುನರ್ಮಿಲನ. ಎಲ್ಲವೂ ಸುಖಾಂತ. ಇಲ್ಲಿ ಹೆಣ್ಣಿಗೆ ಆಕ್ರೋಶಿಸುವುದರ ಹೊರತು ಸ್ವಂತದ ಆಯ್ಕೆಗಳಿಲ್ಲ ಎಂದೇ ಬಿಂಬಿಸಲಾಗುತ್ತದೆ. ಅಪರೂಪಕ್ಕೆ ಹೆಂಡತಿಯು ಗಂಡನನ್ನು ಕಾಯಮ್ಮಾಗಿ ತ್ಯಜಿಸುತ್ತ (ಉದಾ. ಹಿಂದೀ ಚಿತ್ರ 'ಅರ್ಥ್') ಸಬಲೀಕರಣದ ಮಾದರಿಯಾಗುತ್ತಾಳೆ. ಆದರೆ, ಗಂಡ ಮರಳಿದ ಮೇಲೂ ಆಘಾತಕ್ಕೊಳಗಾದ ಹೆಂಡತಿಯ ಭಯಭೀತ ಭಾವ, ವರ್ಷಗಟ್ಟಲೆ ಕಾಡುವ ಅಭದ್ರತೆಯನ್ನು ಹಿಂಜಿ ತೋರಿಸಿದ್ದು ನನ್ನ ಕಣ್ಣಿಗಂತೂ ಬಿದ್ದಿಲ್ಲ.

ಇಂಥ ಪ್ರಸಾರ ಮಾಧ್ಯಮಗಳಿಂದ ಏನು ಪರಿಣಾಮ ಆಗುತ್ತಿದೆ? ಒಂದುಕಡೆ ಪರಸಂಬಂಧವು ಕಲ್ಪನೆಗಳನ್ನು ರಂಜಿಸುವ ಅವಕಾಶವನ್ನು ಅನುಭವಿಸುತ್ತ, ಇನ್ನೊಂದು ಕಡೆ ಅದೆಲ್ಲಾದೀತೋ ಎಂದು ಅದರ ಬಗೆಗಿನ ಆತಂಕವನ್ನು ಹತೋಟಿಗಿಡಲು ವೀಕ್ಷಕರು ಹೆಣಗಬೇಕಾಗುತ್ತದೆ.

ದ್ವಿಮುಖ ನೀತಿ: ಹೊರಸಂಬಂಧದ ವಿಷಯ ಬಂದಾಗ ಹೆಣ್ಣುಗಂಡುಗಳ ನಡುವಿನ ತಾರತಮ್ಯ ಎದ್ದುಕಾಣುತ್ತದೆ. ಉದಾ, ಗಂಡನು ಹೊರಸಂಬಂಧ ಬಯಸದಂತೆ ನೋಡಿಕೊಳ್ಳುವ ಜವಾಬ್ದಾರಿ ಹೆಂಡತಿಯದು ಎಂಬ ನಂಬಿಕೆ ನಮ್ಮಲ್ಲಿ ಪ್ರಬಲವಾಗಿದೆ. ಅಷ್ಟಕ್ಕೂ ಹೊರಸಂಬಂಧ ನಡೆದರೆ ಅದಕ್ಕೂ ಹೆಂಡತಿಯ ತಲೆಯ ಮೇಲೆ ಗೂಬೆ ಕೂರಿಸಲಾಗುತ್ತದೆ. 'ಅವಳು ಗಂಡನಿಗೆ ಸಾಕಷ್ಟು ಸುಖ ಕೊಟ್ಟಿದ್ದರೆ ಆತ ಹೊರಹೋಗುವ ಪ್ರಸಂಗ ಬರುತ್ತಿತ್ತೆ?' ಎಂದು ಗಂಡಸರಿರಲಿ, ಹೆಂಗಸರೇ ಪ್ರಶ್ನಿಸುವುದನ್ನು ನೋಡಿದ್ದೇನೆ. ಶರೀರ ಸುಖವನ್ನು ಹಸಿವೆ ಹೊರವೂಟಕ್ಕೆ ಹೋಲಿಸಿ ಅತಿಯಾಗಿ ಸರಳೀಕರಿಸಲಾಗುತ್ತದೆ. ಒಬ್ಬಳು ವಿವಾಹಿತೆ ಹೊರಸಂಬಂಧ ಮಾಡಿದರಂತೂ ಹೊಣೆಗಾರಳು ಅವಳೇ!

ವಿವಾಹಿತನೊಂದಿಗೆ ಪರಸಂಬಂಧ ಇಟ್ಟುಕೊಂಡ ಅವಿವಾಹಿತ ಹೆಣ್ಣಿನ ಬಗೆಗೆ ಜನಸಾಮಾನ್ಯರಲ್ಲಿ ಏನು ಅನಿಸಿಕೆಯಿದೆ? ಆ ಪ್ರಣಯಿಯು ಕಾಮವನ್ನು ಪ್ರಚೋದಿಸುವ, ಸಂಸಾರ ಒಡೆಯುವ ಪ್ರವೃತ್ತಿಯವಳು ಎಂಬ ಭಾವನೆಯಿದೆ. ಒಂದುಸಲ ಗಂಡ, ಪ್ರಣಯಿಯು ತನ್ನ ಮೈಮೇಲೆ ಬಿದ್ದುದರಿಂದಲೇ ತನಗೆ ಕಾಮೋದ್ರೇಕವಾಗಿ ಅನಿವಾರ್ಯವಾಗಿ ಕೂಡುವಂತಾಯಿತು ಎಂದು ಹೇಳಿದ. ಆಗ ನಾನು ಕೇಳಿದೆ: 'ಆಕೆ ನಿಮಗೆ ಉದ್ರೇಕ ಉಂಟುಮಾಡಿದ್ದರೂ ಅವಳನ್ನು ಕೂಡುವುದು ನಿಮ್ಮ ಆಯ್ಕೆಯಾಗಿತ್ತಲ್ಲವೆ?' ಆತನಿಗೆ ಉತ್ತರಿಸಲಾಗಲಿಲ್ಲ.

ನಿಜಜೀವನದಲ್ಲಿ ಪರಸಂಬಂಧವು ಸಂಬಂಧಪಟ್ಟ ಮೂವರಲ್ಲೂ ದೀರ್ಘ ನರಳಿಕೆ, ನೋವಿಗೆ ಹಾದಿಮಾಡಿಕೊಡುತ್ತದೆ. ಇದರ ದುಷ್ಪರಿಣಾಮ ಎಂದಿಗೂ ಮುಗಿಯುವುದಿಲ್ಲವೇನೋ ಎನ್ನಿಸುತ್ತದೆ. ದಾಂಪತ್ಯದಲ್ಲಿ ಪರಸಂಬಂಧವು ತಾತ್ಕಾಲಿಕವಾದರೂ ಪರಿಣಾಮ ಮಾತ್ರ ಬಹುಕಾಲ ಇರುತ್ತದೆ; ಅಷ್ಟೇ ಅಲ್ಲ, ಅದರ ಬಿಸಿ ಮಕ್ಕಳಿಗೂ ತಾಗುತ್ತದೆ. ನಮ್ಮಲ್ಲಿ ಕೆಲವು ಹೊರಸಂಬಂಧಗಳು ಮುಂದುವರಿದು ಕಾಯಂ ಆಗಿವೆ ಆಗ ಗಂಡ ಇನ್ನೊಂದು ಸಂಸಾರವನ್ನು ಹೂಡಿದ್ದಿದೆ. ನಿರುಪಾಯರಾದ ಅವನ ಮಕ್ಕಳು ಹೊರಸಂಬಂಧದಿಂದ ಹುಟ್ಟಿದ ಮಕ್ಕಳನ್ನು ತಮ್ಮ ಒಡಹುಟ್ಟಿದವರೆಂದು ಒಪ್ಪಿಕೊಂಡದ್ದೂ ಇದೆ!